# ಕಾನೂನು ಭಂಗದಿಂದ ಜೀವನದಲ್ಲಿ ನಷ್ಟವೇ ಹೆಚ್ಚು: ಚೆಲುವಯ್ಯ

ಕುಂಬ್ರ, ನ. 16: ಯಾವುದೋ ಸಣ್ಣ ವೈಯಕ್ತಿಕ ದ್ವೇಷಕ್ಕೋ, ಕುಡಿದ ಅಮಲಿನಲ್ಲಿಯೋ ಗಲಾಟೆ ಮಾಡಿದರೆ ಜೀವನದಲ್ಲಿ ನಷ್ಟವೇ ಹೆಚ್ಚು. ಇದರಿಂದ ಮಕ್ಕಳ ಭವಿಷ್ಯವೂ ಹಾಳಾಗುತ್ತದೆ. ಪ್ರತಿಯೊಬ್ಬರೂ ಈ ಬಗ್ಗೆ ಎಚ್ಚರವಾಗಿರಬೇಕು. ಸಣ್ಣ ವಿಚಾರಕ್ಕೆ ಕಾನೂನನ್ನು ಕೈಗೆತ್ತಿಕೊಳ್ಳಬಾರದು ಎಂದು ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆಯ ಎಎಸ್‌ಐ ಚೆಲುವಯ್ಯ ಹೇಳಿದರು.

ಅವರು ಗ್ರಾಮಾಂತರ ಠಾಣೆಯಲ್ಲಿ ನಡೆದ ಪರಿಶಿಷ್ಟ ಜಾತಿ ಮತ್ತು ಪಂಗಡದ ಕುಂದುಕೊರತೆಯ ಸಭೆಯಲ್ಲಿ ಮಾತನಾಡಿದರು.

ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸರಕಾರದಿಂದ ಅನೇಕ ಸೌಲಭ್ಯಗಳು ದೊರೆಯುತ್ತವೆ. ಈ ಸೌಲಭ್ಯಗಳ ಸದುಪಯೋಗ ಅಗತ್ಯ. ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ನೀಡಿ ಸಮಾಜದಲ್ಲಿ ಸತ್ಪ್ರಜೆಗಳಾಗಿ ರೂಪಿಸುವಂತೆ ಸಲಹೆ ನೀಡಿದರು.

**ಕುಡಿತದ ಚಟ ಬಿಡಿ**

ಕುಡಿತದ ಚಟಕ್ಕೆ ಒಳಗಾಗಿ ಸಂಸಾರವನ್ನು ಹಾಳು ಮಾಡಬೇಡಿ. ಕಳೆದ ಕೆಲವು ತಿಂಗಳಿಂದ ದಲಿತರು ದಲಿತರೊಳಗೆ ಹೊಡೆದಾಟ, ಗಲಾಟೆ ನಡೆದ ಅನೇಕ ಪ್ರಕರಣಗಳು ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಸಂಜೆವರೆಗೂ ಸೌಹಾರ್ದವಾಗಿರುವ ಇರುವ ಕೆಲವರು ಸಂಜೆಯಾಗುತ್ತಲೇ ಹೊಡೆದಾಡಿಕೊಳ್ಳುತ್ತಾರೆ. ಕೆಲವರು ಕುಡಿದು ಗಲಾಟೆ ಮಾಡುತ್ತಾರೆ. ಮತ್ತೆ ಕೆಲವರು ಸಣ್ಣ ವಿಚಾರಕ್ಕೆ ಹೊಡೆದಾಡಿಕೊಂಡು ಆಸ್ಪತ್ರೆಗೆ ದಾಖಲಾಗುತ್ತಾರೆ. ಪ್ರಕರಣ ದಾಖಲು ಮಾಡದಿದ್ದರೆ ಪೊಲೀಸರನ್ನು ದೂರುತ್ತಾರೆ. ಪ್ರಕರಣ ದಾಖಲು ಮಾಡಿದರೆ ಯಾಕೆ ರಾಜಿಯಲ್ಲಿ ಮುಗಿಸಿಲ್ಲ ಎಂದು ಮುಖಂಡರು ಕೇಳುತ್ತಾರೆ. ಈ ರೀತಿಯ ದ್ವಂದ್ವ ನಿಲುವಿನಿಂದ ಪೊಲೀಸರಿಗೆ ಗೊಂದಲವಾಗುತ್ತಿದೆ ಎಂದು ಹೇಳಿದರು.


ಎಎಸ್‌ಐ ಚೆಲುವಯ್ಯ ಮಾತನಾಡಿದರು.

**ಜೂಜಾಟಗಳ ವಿರುದ್ಧ ಕ್ರಮ**

**ತಿಂಗಳಾಡಿಯಲ್ಲಿ ಯುವಕರು ಜೂಜಾಡುತ್ತಾರೆ. ಪೆರ್ಲಂಪಾಡಿಯಲ್ಲಿ ತೆಂಗಿನ ಕಾಯಿ ಕುಟ್ಟುತ್ತಾರೆ. ದರ್ಬೆತ್ತಡ್ಕದಲ್ಲಿ ಕುಡಿದು ರಾತ್ರಿ ವೇಳೆ ಗಲಾಟೆ ಮಾಡುತ್ತಾರೆ. ಇಂತಹವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ ಎಂದು ಸಭಿಕರು ಪೊಲೀಸರಿಗೆ ಮನವಿ ಮಾಡಿದರು.**

**ಎಚ್ಚರ ಅಗತ್ಯ:** ದಲಿತರನ್ನು ಕೆಲವು ಪಕ್ಷಗಳ ಮುಖಂಡರು, ಸಂಘಟನೆಗಳು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಈ ಕುರಿತು ಎಚ್ಚರಿಕೆಯಿಂದ ಇರಬೇಕು. ದಲಿತರೊಳಗೆ ವಿವಾದ ಸೃಷ್ಟಿಸಿ ಅದರಿಂದ ಲಾಭ ಪಡೆಯುವ ಅನೇಕ ಮಂದಿ ಇದ್ದಾರೆ. ಯಾವುದೇ ಪ್ರಕರಣ ದಾಖಲಾದರೆ ಕೋರ್ಟಿಗೆ ಅಲೆಯಬೇಕಾಗುತ್ತದೆ. ಇದರಿಂದ ಕುಟುಂಬಕ್ಕೆ ನೆಮ್ಮದಿ ಇರುತ್ತದೆಯೇ ಎಂದು ಚೆಲುವಯ್ಯ ಪ್ರಶ್ನಿಸಿದರು.

ಅನ್ಯಾಯ ಮಾಡಿ ನ್ಯಾಯ ಕೊಡಿ ಎಂದು ಯಾರೂ ಠಾಣೆಗೆ ಬರುವುದು ಬೇಡ. ಕಾನೂನು ಎಲ್ಲರಿಗೂ ಒಂದೇ ಎಂಬ ವಿಚಾರವನ್ನು ತಿಳಿದುಕೊಳ್ಳಬೇಕು. ಗಲಾಟೆ ಮಾಡಿದರೆ ತಪ್ಪಿಸಿಕೊಳ್ಳಬಹುದು ಎಂಬ ಭ್ರಮೆ ಬೇಡ. ಸಮಾಜದಲ್ಲಿ ಅಶಾಂತಿ ಸೃಷ್ಟಿಸುವ ವ್ಯಕ್ತಿಗಳ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಪೊಲೀಸರು ಭರವಸೆ ನೀಡಿದರು.

ಎಎಸ್‌ಐ ಸುರೇಶ್ ನ್ಯಾಕ್ ಉಪಸ್ಥಿತರಿದ್ದರು. ದಲಿತ ಮುಖಂಡರಾದ ಕೊರಗಪ್ಪ, ಉಮೇಶ್, ವಿಶ್ವನಾಥ, ಸಂಜೀವ, ಗಿರಿಜ, ಸೌಮ್ಯ, ಯಶೋದಾ, ರವೀಂದ್ರ ಮೊದಲಾದವರು ಪಾಲ್ಗೊಂಡರು.

## ಸಂಕ್ಷಿಪ್ತ ಸುದ್ದಿ

### ಸಂಘಟನೆಗಳಿಂದ ಸಮಾಜದ ಪ್ರಗತಿ ಸಾಧ್ಯ: ಶಕುಂತಲಾ ಶೆಟ್ಟಿ


ಸರಕಾರಿ ಆಸ್ಪತ್ರೆಯಲ್ಲಿ ರಕ್ತದಾನ ಶಿಬಿರ ನಡೆಯಿತು.

ಪುತ್ತೂರು(ಕುಂಬ್ರ), ನ. 16: ಸಂಘಟನೆಗಳು ಸಮಾಜಮುಖಿ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದರಿಂದ ಸಮಾಜದ ಪ್ರಗತಿ ಸಾಧ್ಯವಾಗುತ್ತದೆ. ಸಂಘಟನೆಗಳು ಜನಜೀವನದೊಂದಿಗೆ ಬೆರೆತು ಸಮಾಜದ ಪ್ರಗತಿಗೆ ಪೂರಕವಾದ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು ಎಂದು ಪುತ್ತೂರು ಶಾಸಕಿ ಶಕುಂತಳಾ ಟಿ. ಶೆಟ್ಟಿ ಹೇಳಿದರು.

ಅವರು ರಾಜ್ಯ ಸರಕಾರಿ ನೌಕರರ ಸಂಘದ ಪುತ್ತೂರು ತಾಲೂಕು ಘಟಕದ ವತಿಯಿಂದ ನಗರದ ಸರಕಾರಿ ಆಸ್ಪತ್ರೆಯಲ್ಲಿ ನಡೆದ ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ರಕ್ತದಾನ ಅತ್ಯಂತ ಪುಣ್ಯದ ಕೆಲಸ. ನಾವು ನೀಡುವ ರಕ್ತದಿಂದ ಹಲವು ಅಸಹಾಯಕರಿಗೆ ಉಪಕಾರವಾಗುತ್ತದೆ. ಸಂಘಟನೆಗಳ ಮೂಲಕ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಅಗತ್ಯವಾಗಿದೆ. ಸಂಘಟನೆಗಳು ಸಮಾಜದಲ್ಲಿ ಸಂಘರ್ಷವನ್ನು ಸೃಷ್ಟಿಸುವ ಬದಲು ಸಮಾಜಮುಖಿ ಕೆಲಸದಿಂದ ಘನತೆ ಹೆಚ್ಚಿಸಿಕೊಳ್ಳಬೇಕು ಎಂದು ಹೇಳಿದರು.

ಪುತ್ತೂರು ತಹಶೀಲ್ದಾರ್ ಎಂ.ಟಿ. ಕುಳ್ಳೇಗೌಡ ಅಧ್ಯಕ್ಷತೆ ವಹಿಸಿದ್ದರು. ಕ್ಷೇತ್ರ ಶಿಕ್ಷಣಾಧಿಕಾರಿ ಶಶಿಧರ್ ಜಿ.ಎಸ್., ಪುತ್ತೂರು ಸರಕಾರಿ ಆಸ್ಪತ್ರೆಯ ವೈದ್ಯಾಧಿಕಾರಿ ಡಾ| ಸಂದೀಪ್ ಉಪಸ್ಥಿತರಿದ್ದರು.

ತಾಲೂಕು ಸರಕಾರಿ ನೌಕರ ಸಂಘದ ಅಧ್ಯಕ್ಷ ಮೌರಿಸ್ ಮಸ್ಕರೇನ್ಹಸ್ ಸ್ವಾಗತಿಸಿದರು. ಸಂಘದ ರಾಜ್ಯ ಪರಿಷತ್ ಸದಸ್ಯ ಕೃಷ್ಣಪ್ಪ ವಂದಿಸಿದರು.


**ಪುತ್ತೂರು: ಪುತ್ತೂರು ರೋಟರ್ಯಾಕ್ಟ್ ಕ್ಲಬ್ ವತಿಯಿಂದ ಸ್ವಾತಂತ್ರ್ಯ ಹೋರಾಟಗಾರ ನಾಮದೇವ ಶೆಣೈ ಅವರನ್ನು ಬದಿಯಡ್ಕದ ಬಳಿಯ ಅವರ ಮನೆಗೆ ತೆರಳಿ ಸಮ್ಮಾನಿಸಲಾಯಿತು. ಈ ಸಂದರ್ಭದಲ್ಲಿ ರೋಟರ್ಯಾಕ್ಟ್ ಅಧ್ಯಕ್ಷ ಭರತ್ ಚನಿಲ, ಕಾರ್ಯದರ್ಶಿ ಚಂದ್ರಶೇಖರ, ಕೆ. ಸುರೇಶ್ ಶೆಟ್ಟಿ, ಎಂ. ಸುರೇಶ್ ಉಪಸ್ಥಿತರಿದ್ದರು.**

### ಇಂದು ಜಿ.ಪಂ. ಅಧ್ಯಕ್ಷರಿಂದ ಪ್ರಗತಿ ಪರಿಶೀಲನಾ ಸಭೆ

ಸುಳ್ಯ, ನ. 16: ಸುಳ್ಯ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ದ.ಕ. ಜಿ.ಪಂ. ಅಧ್ಯಕ್ಷೆ ಆಶಾ ತಿಮ್ಮಪ್ಪ ಅವರ ಅಧ್ಯಕ್ಷತೆಯಲ್ಲಿ ಪ್ರಗತಿ ಪರಿಶೀಲನಾ ಸಭೆ ನ.17 ರಂದು ಪೂರ್ವಾಹ್ನ 10.30ಕ್ಕೆ ನಡೆಯಲಿದೆ ಎಂದು ಪ್ರಕಟನೆ ತಿಳಿಸಿದೆ.

### ನ. 22 : ಪ್ರತಿಭಾ ರತ್ನ ಪುರಸ್ಕೃತರಿಗೆ ಅಭಿನಂದನೆ

ಸುಳ್ಯ, ನ. 16 : ಸಾರ್ವಜನಿಕ ಶಿಕ್ಷಣ ಇಲಾಖೆಯ ಸುಳ್ಯ ತಾಲೂಕು ಬೋಧಕೇತರ ನೌಕರರ ಸಂಘದ ವತಿಯಿಂದ ನ. 22ರಂದು ಪೂರ್ವಾಹ್ನ 11 ಗಂಟೆಗೆ ಸುಳ್ಯದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯ ಮುಂಭಾಗದಲ್ಲಿರುವ ಅಧಿಕಾರಿಗಳ ಸಂಘದ ನೂತನ ಕಟ್ಟಡದ ಸಭಾಭವನದಲ್ಲಿ ರಾಷ್ಟ್ರ- ರಾಜ್ಯ ಮಟ್ಟದ ಇನ್‌ಸ್ಪೈರ್ ಅವಾರ್ಡ್ ಹಾಗೂ ತಾಲೂಕು, ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಪ್ರತಿಭಾ ರತ್ನ ಪ್ರಶಸ್ತಿ ಪುರಸ್ಕೃತ ವಿದ್ಯಾರ್ಥಿಗಳನ್ನು ಗಣ್ಯರ ಸಮ್ಮುಖದಲ್ಲಿ ಅಭಿನಂದಿಸಲಾಗುವುದು. ಪ್ರಶಸ್ತಿ ಪುರಸ್ಕೃತ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಸಂಘಟಕರು ವಿನಂತಿಸಿದ್ದಾರೆ.

### ಬಾಳಿಲ ವಿದ್ಯಾಬೋಧಿನಿ ಶಾಲೆಯಲ್ಲಿ ಮಕ್ಕಳ ದಿನಾಚರಣೆ

ಸುಳ್ಯ, ನ. 16 : ಬಾಳಿಲ ವಿದ್ಯಾಬೋಧಿನೀ ಪ್ರೌಢಶಾಲೆ ಬಾಳಿಲದಲ್ಲಿ ಮಕ್ಕಳ ದಿನಾಚರಣೆಯನ್ನು ವಿಶೇಷ ರೀತಿಯಲ್ಲಿ ಆಚರಿಸಲಾಯಿತು.

10ನೇ ತರಗತಿ ವಿದ್ಯಾರ್ಥಿ ಕಿಶೋರ್ ಎ.ಪಿ. ಸಭಾಧ್ಯಕ್ಷತೆ ವಹಿಸಿದ್ದರು. ಕುಮಾರ್ ಮೌನೇಶ್ ಉದ್ಘಾಟಿಸಿದರು. ಧನ್ಯ ಬಹುಮಾನ ವಿತರಿಸಿದರು .

ನಿತ್ಯಶ್ರೀ ಮುಖ್ಯ ಅತಿಥಿಯಾಗಿ ಮಕ್ಕಳ ದಿನಾಚರಣೆಯ ಮಹತ್ವ ಮತ್ತು ಪ್ರಧಾನ ಮಂತ್ರಿ ಜವಹರಲಾಲ್ ನೆಹರೂ ಅವರ ಬಗ್ಗೆ ತಿಳಿಸಿದರು.

ಮುಖ್ಯೋಪಾಧ್ಯಾಯ ಎಂ.ಎಸ್. ಶಿವರಾಮ ಶಾಸ್ತ್ರಿ ಮತ್ತು ಶಾಲಾ ಸಂಚಾಲಕ ರಾಮಚಂದ್ರ ರಾವ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಡಿ.ಕೆ.ಆರ್.ಡಿ.ಎಸ್. ಅವರು ನೀಡಿದ ನಗದು ಬಹುಮಾನವನ್ನು 10 ವಿದ್ಯಾರ್ಥಿಗಳಿಗೆ ವಿತರಿಸಲಾಯಿತು. ವಿದ್ಯಾಥಿಗಳಿಗಾಗಿ ರಸಪ್ರಶ್ನೆ ಹಾಗೂ ಹಾಡು ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಕ್ರೀಡಾಕೂಟದಲ್ಲಿ ಗೆದ್ದವರಿಗೆ ಬಹುಮಾನವನ್ನು ವಿತರಿಸಲಾಯಿತು.

ವಿದ್ಯಾರ್ಥಿಗಳಾದ ಶರತ್ ಕೆ , ಸುಜಿತ್ ಕೆ., ವಿದ್ಯಾಶಾರದ, ನಿವೇದಿತಾ ರೈ, ಜಯಶ್ರೀ ಎನ್., ಸುಷ್ಮಾ, ಕಣ್ಮಣಿ ಕೆ. ಕಾರ್ಯಕ್ರಮದಲ್ಲಿ ಸಹಕರಿಸಿದರು. ಸಹಶಿಕ್ಷಕರಾದ ಲೋಕೇಶ್ ಬಿ ಮತ್ತು ಶಶಿಕಲಾ ಕಾರ್ಯಕ್ರಮ ಸಂಯೋಜಿಸಿದ್ದರು.

# ವಿದ್ಯಾರ್ಥಿನಿಯರ ಚುಡಾವಣೆ: ಕ್ರಮಕ್ಕೆ ಆಗ್ರಹ


ಪುತ್ತೂರು ನಗರ ಠಾಣೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರ ಸಭೆ ನಡೆಯಿತು.

ಪುತ್ತೂರು(ಕುಂಬ್ರ), ನ.16 : ಪುತ್ತೂರು ನಗರ ವ್ಯಾಪ್ತಿಯ ಶಾಲೆ ಬಿಡುವ ಸಮಯದಲ್ಲಿ ವಿದ್ಯಾರ್ಥಿನಿಯನ್ನು ಚುಡಾಯಿಸುವ ಆರೋಪಿಗಳನ್ನು ಪತ್ತೆ ಹಚ್ಚಲು ಇಲಾಖೆಯಿಂದ ಮಫ್ತಿನಲ್ಲಿ ತನಿಖೆ ನಡೆಸಲಾಗುವುದು. ಈ ಕುರಿತು ಸಾರ್ವಜನಿಕರ ಸಹಕಾರ ಅಗತ್ಯ ಎಂದು ಪುತ್ತೂರು ನಗರ ಠಾಣಾ ಎಸ್.ಐ. ಅಬ್ದುಲ್ ಖಾದರ್ ಹೇಳಿದರು.

ಅವರು ಪುತ್ತೂರು ನಗರ ಠಾಣೆಯಲ್ಲಿ ರವಿವಾರ ನಡೆದ ಪರಿಶಿಷ್ಟ ಜಾತಿ, ಪಂಗಡದವರ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

**ದಂಡ ವಿಧಿಸಿ**

ಸಾರ್ವಜನಿಕ ಸ್ಥಳಗಳಲ್ಲಿ ಸಿಗರೇಟು ಎಳೆದರೆ ದಂಡ ವಿಧಿಸುತ್ತಿದ್ದೀರಿ. ಆದರೆ ಕೆಲವರು ಸಾರ್ವಜನಿಕ ಸ್ಥಳಗಳಲ್ಲಿ ಮಲ-ಮೂತ್ರ ವಿಸರ್ಜನೆ ಮಾಡುತ್ತಾರೆ. ಎಲ್ಲೆಂದರಲ್ಲಿ ಕಸ ಬಿಸಾಡುತ್ತಾರೆ. ಈ ಕುರಿತು ಸೂಕ್ತ ದಂಡ ವಿಧಿಸಿ ಎಂದು ಅಣ್ಣಪ್ಪ ಕಾರೆಕ್ಕಾಡು ಹೇಳಿದರು.

**ಬೆನಿಫಿಟ್ ಸ್ಕೀಂ ಎಚ್ಚರ ವಹಿಸಿ**

ಬೆನಿಫಿಟ್ ಸ್ಕೀಂಗೆ ಸೇರಿದವರಿಗೆ ಹಣ ವಾಪಾಸು ಸಿಗುತ್ತಿಲ್ಲ, ಕುರಿಯದ ವ್ಯಕ್ತಿಯೋರ್ವರು ಸ್ಕೀಮ್ ಮಾಡಿ ವಂಚಿಸುವ ಕುರಿತು ನಮಗೆ ಸಂಶಯವಿದೆ ಎಂದು ರಾಜ ಹೇಳಿದರು. ಇದಕ್ಕೆ ಉತ್ತರಿಸಿದ ಅಬ್ದುಲ್ ಖಾದರ್ ಬೆನಿಫಿಟ್ ನಾವು ಮೊದಲು ಎಚ್ಚೆತ್ತುಕೊಂಡರೆ ನಮ್ಮನ್ನು ಯಾರೂ ಮೋಸ ಮಾಡಲು ಸಾಧ್ಯವಿಲ್ಲ, ಆದ್ದರಿಂದ ಜಾಗರೂಕತೆಯಿಂದ ಇರಬೇಕು ಎಂದು ಹೇಳಿದರು.

**ಪುಂಡರ ವಿರುದ್ಧ ಕ್ರಮ ಕೈಗೊಳ್ಳಿ**

**ಅಣ್ಣಪ್ಪ ಕಾರೆಕ್ಕಾಡು ಅವರು ಮಾತನಾಡಿ, ಕೊಂಬೆಟ್ಟು ಶಾಲೆ ಸೇರಿ ಕೆಲವು ಕಡೆ ಶಾಲೆ ಬಿಡುವ ಸಮಯದಲ್ಲಿ ಕೆಲ ಯುವಕರು ಬೈಕ್‌ನಲ್ಲಿ ವಿದ್ಯಾರ್ಥಿನಿಯರನ್ನು ಹಿಂಬಾಲಿಸಿಕೊಂಡು ಕೀಟಲೆ ಕೊಡುತ್ತಿದ್ದಾರೆ. ಹೊಟೇಲ್‌ನಲ್ಲಿ ವಿದ್ಯಾರ್ಥಿನಿಯರು ಉಪಾಹಾರ ಮಾಡುವಾಗಲೂ ಬಂದು ತಮಾಷೆ ಮಾಡುತ್ತಾರೆ. ಈ ಕುರಿತು ಪೊಲೀಸರು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.**

**ಮೊಬೈಲ್ ಬೈಕ್ ರೈಡ್ ದಂಡ ವಿಧಿಸಿ**

**ಬೈಕ್‌ನಲ್ಲಿ ಹೋಗುವಾಗ ಮೊಬೈಲ್‌ನಲ್ಲಿ ಮಾತನಾಡಿಕೊಂಡು ಹೋಗುವ ಚಾಳಿ ಮತ್ತೆ ಪ್ರಾರಂಭವಾಗಿದೆ. ಈ ನಿಟ್ಟಿನಲ್ಲಿ ದೊಡ್ಡ ಮೊತ್ತದ ದಂಡ ವಿಧಿಸಿ ಎಚ್ಚರಿಕೆ ನೀಡುವಂತೆ ಲೋಕೇಶ್ ತೆಂಕಿಲ ಹೇಳಿದರು. ಇದಕ್ಕೆ ಇತರ ಸದಸ್ಯರು ಧ್ವನಿಗೂಡಿಸಿದರು.**

**ರಿಕ್ಷಾಗಳಿಗೆ ಕಡಿವಾಣ ಹಾಕಿ**

ಪುತ್ತೂರು ನಗರ ಪರಿಸರದಲ್ಲಿ ಬೇರೆಲ್ಲಿಯೂ ಇಲ್ಲದಷ್ಟು ಆಟೋ ರಿಕ್ಷಾ ತುಂಬಿ ಹೋಗಿವೆ. ಬೇರೆ ಗ್ರಾಮಗಳಿಂದ ನಗರಕ್ಕೆ ಬರುವುದೇ ದೊಡ್ಡ ಸಮಸ್ಯೆ ಆಗಿದೆ. ಈ ಕುರಿತು ಪ್ರಾದೇಶಿಕ ಸಾರಿಗೆ ಇಲಾಖೆಗೆ ಗ್ರಾಮಾಂತರ ಪರ್ಮಿಟ್ ಮಾತ್ರ ಕೊಡುವ ಹಾಗೆ ಸೂಚನೆ ನೀಡಬೇಕೆಂದು ಒತ್ತಾಯ ಕೇಳಿ ಬಂತು. ಇದಕ್ಕೆ ಸಂಬಂಧಪಟ್ಟಂತೆ ಎಲ್ಲರೂ ಪ್ರಾದೇಶಿಕ ಸಾರಿಗೆ ಇಲಾಖೆಗೆ ತಿಳಿಸಬೇಕು ಎಂದು ಖಾದರ್ ಹೇಳಿದರು.

**ಟ್ರಾಫಿಕ್ ಪೊಲೀಸರ ನೇಮಿಸಿ**

ಸರಕಾರಿ ಆಸ್ಪತ್ರೆಗೆ ಹೋಗುವ ರಸ್ತೆಯಲ್ಲಿನ ಚಿಣ್ಣರ ಪಾರ್ಕ್ ಬಳಿ ನೋ ಪಾರ್ಕಿಂಗ್ ಬೋರ್ಡು ಇದೆ. ಸೋಮವಾರ ದಿವಸ ಮಾತ್ರ ಸಂಚಾರಿ ಪೊಲೀಸರು ಬಂದು ಕಾನೂನು ಉಲ್ಲಂಘನೆ ಮಾಡಿದವರಿಗೆ ದಂಡ ವಿಧಿಸುತ್ತಾರೆ. ಇತರ ದಿನಗಳಲ್ಲಿ ಅಲ್ಲಿಗೆ ಸಂಚಾರಿ ಪೊಲೀಸರು ಬರುವುದೇ ಇಲ್ಲ. ಮಂಜಲ್ಪಡ್ಪು ಸುದಾನ ಶಾಲೆ ಮತ್ತು ಬಿಇಎಂ ಶಾಲೆಯ ಬಳಿ ಮಕ್ಕಳು ರಸ್ತೆ ಅಡ್ಡ ದಾಟುವಾಗ ಹಲವಾರು ಅಪಘಾತ ಸಂಭವಿಸಿದೆ. ಟ್ರಾಫಿಕ್ ಪೊಲೀಸ್ ಸಿಬಂದಿಯನ್ನು ನೇಮಕ ಮಾಡಬೇಕು ಎಂದು ಸಭೆಯಲ್ಲಿ ಸದಸ್ಯರು ಆಗ್ರಹಿಸಿದರು. ಈ ಕುರಿತು ಸಂಚಾರಿ ಪೊಲೀಸ್ ಠಾಣೆಗೆ ತಿಳಿಸಲಾಗುವುದು ಎಂದು ಅಬ್ದುಲ್ ಖಾದರ್ ಹೇಳಿದರು.

**ವಾಹನ ಪತ್ತೆ ಮಾಡಿ ಇಲ್ಲವೆ ಪರಿಹಾರ ನೀಡಿ**

6 ತಿಂಗಳ ಹಿಂದೆ ನೆಹರೂ ನಗರದಲ್ಲಿ ಕೋಳಿ ಸಾಗಾಟದ ವಾಹನ ಢಿಕ್ಕಿಯಾಗಿ ಪಾದಚಾರಿ ಗಣೇಶ್ ಮೃತಪಟ್ಟಿದ್ದರು. ಆದರೆ ಅಪಘಾತ ಎಸಗಿದ ವಾಹನ ಪತ್ತೆಯಾಗಿಲ್ಲ, ಮೃತನ ಮನೆಯವರಿಗೆ ಪರಿಹಾರ ಸಿಕ್ಕಿಲ್ಲ, ಬಪ್ಪಳಿಗೆಯಲ್ಲಿ ತಿಂಗಳ ಹಿಂದೆ ಸರಕಾರಿ ಉದ್ಯೋಗಿಗೆ ಜೀಪು ಢಿಕ್ಕಿಯಾಗಿ ಪರಾರಿಯಾಗಿತ್ತು. ಅವರಿಗೆ ಚಿಕಿತ್ಸೆಗೆ ಸುಮಾರು 40 ಸಾವಿರ ರೂ. ಖರ್ಚು ತಗುಲಿದೆ. ಆದರೆ ಅವರಿಗೆ ಯಾವುದೇ ಪರಿಹಾರ ಸಿಕ್ಕಿಲ್ಲ, ಈ ಕುರಿತು ಪರಿಹಾರಕ್ಕಾಗಿ ಅಣ್ಣಪ್ಪ ಕಾರೆಕ್ಕಾಡು ಮನವಿ ಮಾಡಿದರು.

ಇದಕ್ಕೆ ಉತ್ತರಿಸಿದ ಅಬ್ದುಲ್ ಖಾದರ್ ಸರಕಾರಿ ಉದ್ಯೋಗದಲ್ಲಿರುವವರಿಗೆ ಪರಿಹಾರ ಸಿಗುತ್ತದೆ ಎಂಬ ಭರವಸೆ ಇಲ್ಲ, ಆದರೆ ನೆಹರೂ ನಗರ ನಿವಾಸಿ ಬಡವರಾಗಿದ್ದರಿಂದ ಅವರಿಗೆ ಪರಿಹಾರ ಸಿಗುವ ನಿಟ್ಟಿನಲ್ಲಿ ಪ್ರಯತ್ನ ಮಾಡುವ ಎಂದು ಹೇಳಿದರು.

# ‘ಅಕ್ರಮ ಚಟುವಟಿಕೆ ತಡೆಗೆ ಸಾರ್ವಜನಿಕರ ಸಹಕಾರ ಅಗತ್ಯ’


ಉಪ್ಪಿನಂಗಡಿ ಠಾಣೆಯಲ್ಲಿ ಪರಿಶಿಷ್ಟ ಜಾತಿ, ಪಂಗಡದ ಸಭೆ ನಡೆಯಿತು.

ಉಪ್ಪಿನಂಗಡಿ, ನ. 16: ಸಮಾಜದಲ್ಲಿ ಅಕ್ರಮ ಚಟುವಟಿಕೆಗಳು ನಡೆಯದಂತೆ ನೋಡಿಕೊಳ್ಳುವ ಜವಾಬ್ದಾರಿ ಪ್ರತಿಯೊಬ್ಬ ನಾಗರಿಕನಿಗೂ ಇರುತ್ತದೆ. ಅಕ್ರಮ ಚಟುವಟಿಕೆಗಳನ್ನು ಮಟ್ಟ ಹಾಕಲು ಪೊಲೀಸ್ ಇಲಾಖೆಯೊಂದಿಗೆ ಸಾರ್ವಜನಿಕರೂ ಕೈಜೋಡಿಸಬೇಕು ಎಂದು ಪುತ್ತೂರು ಗ್ರಾಮಾಂತರ ಪೊಲೀಸ್ ಸರ್ಕಲ್ ಇನ್‌ಸ್ಪೆಕ್ಟರ್ ಅನಿಲ್ ಕುಲಕರ್ಣಿ ಹೇಳಿದರು.

ಅವರು ಉಪ್ಪಿನಂಗಡಿ ಪೊಲೀಸ್ ಠಾಣೆಯಲ್ಲಿ ನಡೆದ ಪರಿಶಿಷ್ಟ ಜಾತಿ, ಪಂಗಡಗಳ ಕುಂದುಕೊರತೆ ಸಭೆಯಲ್ಲಿ ಮಾತನಾಡಿದರು. ಠಾಣೆಗೆ ಯಾರೂ ಮಧ್ಯವರ್ತಿಗಳ ಜತೆಗೆ ಬರುವ ಆವಶ್ಯಕತೆ ಇಲ್ಲ, ನೇರವಾಗಿ ಬಂದು ಪೊಲೀಸರನ್ನು ಸಂಪರ್ಕಿಸಬಹುದು ಎಂದರು.

**ಕೇವಲ ಗಸ್ತು ತಿರುಗುವುದು ಮುಖ್ಯವಲ್ಲ, ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಧೈರ್ಯ ತುಂಬುವ ಕೆಲಸವನ್ನು ಇಲಾಖೆಯಿಂದ ಮಾಡಲಾಗುತ್ತದೆ. ಸಾರ್ವಜನಿಕರು ಹಾಗೂ ಇಲಾಖೆ ಜತೆಯಾಗಿ ಕಾರ್ಯನಿರ್ವಹಿಸಿದರೆ ಯಾವುದೇ ಸಮಸ್ಯೆಯನ್ನು ಸುಲಭದಲ್ಲಿ ಬಗೆಹರಿಸಬಹುದು ಎಂದು ಜಗದೀಶ್ ರೆಡ್ಡಿ ಹೇಳಿದರು.**

ಉಪ್ಪಿನಂಗಡಿ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಜಗದೀಶ್ ರೆಡ್ಡಿ ಮಾತನಾಡಿ, ಸರಕಾರದಿಂದ ನೀಡಲಾಗುವ ಸವಲತ್ತುಗಳನ್ನು ಉತ್ತಮ ರೀತಿಯಲ್ಲಿ ಸದುಪಯೋಗಪಡಿಸಿಕೊಂಡು ಬದುಕಬೇಕು. ಪೋಷಕರು ತಮ್ಮ ಮಕ್ಕಳು ಕೆಟ್ಟ ಚಟಗಳಿಗೆ ಬಲಿಯಾಗದಂತೆ ನೋಡಿಕೊಂಡು ಮಕ್ಕಳ ಉತ್ತಮ ಭವಿಷ್ಯ ರೂಪಿಸಬೇಕು. ಯಾವುದೇ ಸಮಸ್ಯೆ ಇದ್ದರೂ ಇಂತಹ ಸಭೆಗಳಲ್ಲಿ ವಿಮರ್ಶಿಸಿ ಪರಿಹಾರ ಕಂಡುಕೊಳ್ಳೋಣ ಎಂದರು.

ಸಭೆಯಲ್ಲಿ ರಘುರಾಮ ಎ. ಮಾತನಾಡಿ ರಾತ್ರಿ ವೇಳೆ ಅಕ್ರಮ ಚಟುವಟಿಕೆ ಹಾಗೂ ಕಳ್ಳತನಗಳನ್ನು ತಡೆಯುವ ಸಲುವಾಗಿ ಪೊಲೀಸ್ ಗಸ್ತು ಹೆಚ್ಚಿಸಬೇಕು ಎಂದು ವಿನಂತಿಸಿದರು. ಇದಕ್ಕೆ ಉತ್ತರಿಸಿದ ಸಬ್ ಇನ್‌ಸ್ಪೆಕ್ಟರ್ ಜಗದೀಶ್ ರೆಡ್ಡಿ, ಕೇವಲ ಗಸ್ತು ತಿರುಗುವುದು ಮುಖ್ಯವಲ್ಲ, ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಧೈರ್ಯ ತುಂಬುವ ಕೆಲಸವನ್ನು ಇಲಾಖೆಯಿಂದ ಮಾಡಲಾಗುತ್ತದೆ. ಸಾರ್ವಜನಿಕರು ಹಾಗೂ ಇಲಾಖೆ ಜತೆಯಾಗಿ ಕಾರ್ಯನಿರ್ವಹಿಸಿದರೆ ಯಾವುದೇ ಸಮಸ್ಯೆಯನ್ನು ಸುಲಭದಲ್ಲಿ ಬಗೆಹರಿಸಬಹುದು ಎಂದರು. ಸಭೆಯಲ್ಲಿ ಹಿರೇಬಂಡಾಡಿಯ ಮೋನಪ್ಪ, ದುಗ್ಗಪ್ಪ ಮುಗೇರ, ಸೇಸಪ್ಪ ನಾಯ್ಕ, ಶೀನ ನಾಯ್ಕ, ನವೀನ್, ರುಕ್ಮಯ, ರವಿಚಂದ್ರ, ಗಿರೀಜಾ ಮೊದಲಾದವರು ಉಪಸ್ಥಿತರಿದ್ದರು. ಪೊಲೀಸ್ ಸಿಬಂದಿ ಶಿವಪ್ರಸಾದ್ ಸ್ವಾಗತಿಸಿ, ಮನೋಹರ ವಂದಿಸಿದರು.


**ಪುತ್ತೂರು: ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯವು ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ನಡೆಸಿದ ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಪುತ್ತೂರು ವಿವೇಕಾನಂದ ಎಂಜಿನಿಯರಿಂಗ್ ಕಾಲೇಜಿನ ಕಂಪ್ಯೂಟರ್ ಸೈನ್ಸ್ ವಿಭಾಗದ ವಿದ್ಯಾರ್ಥಿನಿ ಸುಶೋಭಿತಾ ಪಿ. ಎಸ್. ಕುಲಪತಿ ಡಾ| ಎಚ್. ಮಹೇಶಪ್ಪ ಅವರಿಂದ ಬಹುಮಾನ ಸ್ವೀಕರಿಸಿದರು.**


**ಬಡಗನ್ನೂರು: ಕ್ಯೊಲ ಅಂಗನವಾಡಿ ಕೇಂದ್ರದ ಆವರಣದಲ್ಲಿ ಮಕ್ಕಳ ಹೆತ್ತವರು, ಸ್ತ್ರೀ ಶಕ್ತಿ ಸಂಘದ ಸದಸ್ಯರು ಸ್ವಚ್ಛತಾ ಕಾರ್ಯ ನಡೆಸಿದರು.**

# ‘ಸಂಶೋಧಕರಿಂದ ಜಗತ್ತು ಬೆಳಗಿಸುವ ಕಾರ್ಯವಾಗಲಿ’


ಶ್ರೀ ವಿದ್ಯಾಪ್ರಸನ್ನ ಸ್ವಾಮೀಜಿ ದೀಪ ಬೆಳಗಿಸಿ, ಉದ್ಘಾಟಿಸಿದರು.

**ಭಗವಂತನ ಸೃಷ್ಟಿಯಲ್ಲಿ ಮತ್ತೆ ಸಂಶೋಧನೆ ಮಾಡುವುದು ಮಾನವನ ಆದ್ಯತೆಯಾಗಿದೆ. ಭಗವಂತನ ಆಶೀರ್ವಾದದಿಂದ ಜಗತ್ತು ಬೆಳಗುತ್ತಿದೆ. ಈತನ ವರದ ಪ್ರಭಾವದಿಂದ ಜಗತ್ತಿನಲ್ಲಿ ವಿನೂತನ ಅವಕಾಶಗಳು ಲಭ್ಯವಾಗುತ್ತದೆ. ಉತ್ತಮ ಕಾರ್ಯಗಳನ್ನು ಮಾಡಿದಾಗ ಭಗವಂತನ ಆಶೀರ್ವಾದ ಲಭಿಸುತ್ತದೆ ಎಂದು ವಿದ್ಯಾಪ್ರಸನ್ನ ಸ್ವಾಮೀಜಿ ಹೇಳಿದರು.**

ಸುಬ್ರಹ್ಮಣ್ಯ, ನ.16: ವಿನೂತನ ವಿಚಾರಗಳನ್ನು ಹುಡುಕುವ ಮೂಲಕ ಜಗತ್ತನ್ನು ಬೆಳಗಿಸುವ ಕಾರ್ಯ ಸಂಶೋಧಕರಿಂದ ಆಗಬೇಕು. ಇದರಿಂದ ಪ್ರಪಂಚವು ಇನ್ನಷ್ಟು ವಿಸ್ತಾರವಾಗುತ್ತದೆ. ಸಂಶೋಧನೆಗಳಿಂದ ಜಗವು ಬೆಳಗಲು ಸಾಧ್ಯವಿದೆ ಎಂದು ಸುಬ್ರಹ್ಮಣ್ಯ ಮಠಾಧೀಶ ಶ್ರೀ ವಿದ್ಯಾಪ್ರಸನ್ನ ಸ್ವಾಮೀಜಿ ಹೇಳಿದರು.

ಅವರು ಕೆಎಸ್‌ಎಸ್ ಕಾಲೇಜು ಸುಬ್ರಹ್ಮಣ್ಯ ಮತ್ತು ವೇದವ್ಯಾಸ ಸಂಶೋಧನ ಕೇಂದ್ರ ಇವುಗಳ ಸಂಯುಕ್ತ ಆಶ್ರಯದಲ್ಲಿ ರವಿವಾರ ನಡೆದ ಸಂಶೋಧನಾ ಸಹಯೋಗ ಒಪ್ಪಂದ ಮತ್ತು ಸ್ಥಳನಾಮ ಅಧ್ಯಾಯನದ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಆಶೀರ್ವಚನ ನೀಡಿದರು.

ಭಗವಂತನು ಸೃಷ್ಟಿಸಿದ ಜಗತ್ತನ್ನು ಮಾನವನು ತನ್ನದೇ ಆದ ಚಿಂತನೆಗಳಿಂದ ಕಂಡುಕೊಂಡು ನವೀನತೆಯತ್ತ ಕೊಂಡೊಯ್ಯುವ ಸಾಧನವಾದ ಸಂಶೋಧನಾ ಕ್ಷೇತ್ರವಾಗಿದೆ. ಅಂತರ್ಮುಖಿಯಾಗಿ ಸಾಧನೆ ಮಾಡಿದಾಗ ಗೌರವ ಪ್ರಾಪ್ತಿಯಾಗುತ್ತದೆ. ಜ್ಞಾನ ಸಂಪತ್ತನ್ನು ಅಭಿವೃದ್ಧಿಗೊಳಿಸಲು ಭಗವಂತ ಪ್ರಕೃತಿಯಲ್ಲಿ ಬೇಕಾದಷ್ಟು ಮೂಲಗಳನ್ನು ನೀಡಿದ್ದಾನೆ. ಅವುಗಳನ್ನು ಬಳಸಿಕೊಂಡು ಸಂಶೋಧನೆ ಮಾಡುವುದು ಪ್ರಗತಿಯ ಉತ್ತುಂಗಕ್ಕೆ ಸಾಧನವಾಗುತ್ತದೆ ಎಂದು ಹೇಳಿದರು.

ಪ್ರಾಂಶುಪಾಲ ಪ್ರೊ| ದಿನೇಶ್ ಕಾಮತ್ ಮುಖ್ಯ ಅತಿಥಿಯಾಗಿದ್ದರು. ಕಾಲೇಜಿನ ಇತಿಹಾಸ ವಿಭಾಗದ ಮುಖ್ಯಸ್ಥ ಪ್ರೊ| ಮನಮೋಹನ್ ಎಂ., ಸಂಸ್ಕೃತ ವಿಭಾಗದ ಮುಖ್ಯಸ್ಥ ಪ್ರೊ| ಮಂಜುನಾಥ್ ಎನ್.ಭಟ್, ಉಪನ್ಯಾಸಕರಾದ ಉದಯಕುಮಾರ್, ತನುಜಾ, ಪ್ರಸಾದ್ ಎನ್., ಉದಯಕುಮಾರ್ ಅಲಂಕಾರ್ ಉಪಸ್ಥಿತರಿದ್ದರು.

ಸಮಾರಂಭದಲ್ಲಿ ವೇದವ್ಯಾಸ ಸಂಶೋಧನಾ ಕೇಂದ್ರದ ಅಧ್ಯಕ್ಷರಾದ ಸ್ವಾಮೀಜಿ ಕೆ.ಎಸ್.ಎಸ್. ಕಾಲೇಜಿನ ಪ್ರಾಂಶುಪಾಲರಿಗೆ ಹಸ್ತಪ್ರತಿ ಹಸ್ತಾಂತರಿಸುವ ಮೂಲಕ ಸಂಶೋಧನಾ ಸಹಯೋಗ ಒಪ್ಪಂದ ಮಾಡಿಕೊಂಡರು. ತರಬೇತಿ ಕಾರ್ಯಾಗಾರ ನಿಮಿತ್ತ ನಡೆದ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ನ್ಯೂಪಿಕ್ ಎನ್ ಪೇ
ಸೂಪರ್ ಮಾರ್ಕೆಟ್
ಶ್ರೀಹರಿ ಕಾಂಪ್ಲೆಕ್ಸ್, ಮೈನ್ ರೋಡ್, ಸುಳ್ಯ
ಉದ್ಘಾಟನಾ ಸಮಾರಂಭ
ದಿನಾಂಕ: 17-11-2014 ಸೋಮವಾರ
ಸಮಯ: ಬೆಳಿಗ್ಗೆ 10.00ಕ್ಕೆ
ಉದ್ಘಾಟಕರು : ಎನ್.ಎ.ರಾಮಚಂದ್ರ, ಅಧ್ಯಕ್ಷರು, ನಗರ ಪಂಚಾಯತ್ ಸುಳ್ಯ
ಮುಖ್ಯ ಅತಿಥಿಗಳು : ವಿಶ್ವನಾಥ ರಾವ್, ಅಧ್ಯಕ್ಷರು, ಸುಳ್ಯ ವಾಣಿಜ್ಯ ಮತ್ತು ಕೈಗಾರಿಕೋದ್ಯಮಿಗಳ ಸಂಘ (ರಿ.) ಸುಳ್ಯ ದ.ಕ.
ಎಂ.ವೆಂಕಪ್ಪ ಗೌಡ, ಅಧ್ಯಕ್ಷರು, ಬ್ಲಾಕ್ ಕಾಂಗ್ರೆಸ್ ಸಮಿತಿ
ಎಂ.ಬಿ. ಸದಾಶಿವ, ಮಾಜಿ ಜಿಲ್ಲಾ ರಾಜ್ಯಪಾಲರು, ಲಯನ್ಸ್ ಕ್ಲಬ್
ಕೆ. ಕೃಷ್ಣ ಕಾಮತ್, ಕರ್ನಾಟಕ ಪ್ಲೈವುಡ್ ಸುಳ್ಯ, (ಕಟ್ಟಡ ಮಾಲಕರು)
ಪ್ರಕಾಶ್ ಹೆಗ್ಡೆ, ಅಧ್ಯಕ್ಷರು, ಸ್ಥಾಯಿ ಸಮಿತಿ, ಸುಳ್ಯ ನಗರ ಪಂಚಾಯತ್
ಕೆ.ಎಂ. ಮುಸ್ತಫ, ಸದಸ್ಯರು, ನಗರ ಪಂಚಾಯತ್ ಸುಳ್ಯ
ಆದಂ ಕುಂಞ ಕಮ್ಮಾಡಿ, ಸದಸ್ಯರು, ಎ.ಪಿ.ಎಂ.ಸಿ. ಸುಳ್ಯ
ಹಾಜಿ ಅಬ್ದುಲ್ ಕೆ.ಎಂ., ಮಲ್ನಾಡ್ ಕ್ಯಾಶೂಸ್, ಸುಳ್ಯ
ಅಬ್ಬಾಸ್ ಕೆ. ಕಟ್ಟೆಕಾರ್ಸ್
ಶುಭಕೋರುವವರು: ಝುರಾ ಕಲೆಕ್ಷನ್ಸ್, ಸುಳ್ಯ